ಇಷ್ಟಲಿಂಗ ಪೂಜೆ ಮಾಡುವ ಭಕ್ತರ ಮಠ' ಎಂದು ವಿರೋಧಿಸಿದ. ಊರ ಶ್ರೀಮಂತರು ಇಟ್ಟಿಗೆ ಅರ್ಪಿಸುವ ಕಾರ್ಯಕ್ರಮವನ್ನು ಅದ್ದೂರಿಯಾಗಿ ಮಾಡಿಬಿಟ್ಟರು. ಮಾಂತಮ್ಮ ಮಾತ್ರ ಮನೆ, ಸಂಸಾರ, ಮಕ್ಕಳ ಮದುವೆ ಮಾಡಿ, ಮೊಮ್ಮಕ್ಕಳನ್ನು ಕಾಣತೊಡಗಿದ್ದಳು. ಗಂಡನ ಸ್ಥಾನಮಾನ ಮಠದಲ್ಲಿ ಕಮ್ಮಿಯಾಗುವುದನ್ನು ಅರಿಯುತ್ತಿದ್ದಳು. ಆದರೆ ಊರುಕೇರಿಯಲ್ಲಿ ಚಂದ್ರಕಾಂತಯ್ಯನಿಗೆ ಇದ್ದ ಮರ್ಯಾದೆ ಹಾಗೇ ಇತ್ತು ಎಂಬುದನ್ನು ಮಾಂತಮ್ಮ ಬಲ್ಲಳು. ಅದರಿಂದ ಸಂಪೂರ್ಣ ಮಠದ ನಂಟು ಬಿಟ್ಟು ಬಿಡು ಎಂದು ಹೇಳಲು ಹಿಂಜರಿದಳು. ಚಂದ್ರಕಾಂತಯ್ಯನಿಗೆ ಹೆಂಡತಿಯ ತಾಳ್ಮೆ ಗೊತ್ತಾಗುತ್ತಿತ್ತು.

ಚಂದ್ರಕಾಂತಯ್ಯನಿಗೆ ಆ ದಿನ ನೆನಪಿದೆ. ಸಣ್ಣವರ ವಾರದ ಹುಸಿ ಪ್ರವಚನ ಕೇಳಿ, ಪ್ರಸಾದ ನಿಲಯದಲ್ಲಿ ಪ್ರಸಾದ ಸ್ವೀಕರಿಸಿದ ಮೇಲೆ ಇನ್ನೇನು ಮನೆ ಕಡೆ ಹೋಗಬೇಕು ಅನ್ನುವಾಗ ಚಂದ್ರಮತಿ ವಾರ್ಡನ್ ಮಠದಲ್ಲಿ ಕಾಣಿಸಿದಳು. ವಾಸುದೇವನ ಹೆಂಡತಿ. ಗಂಡ ವ್ಯಾಪಾರ ಮಾಡಿಕೊಂಡಿದ್ದ. ಅಷ್ಟು ಪರಿಚಯವಿತ್ತು. ಆಗಲೇ ಮಠದಲ್ಲಿ ಮಂದಿಯೆಲ್ಲ ಪ್ರಸಾದ ಪಡೆದು ಖಾಲಿಯಾಗಿ ಶಾಂತತೆ ನೆಲಸಿತ್ತು. ಚಂದ್ರಮತಿ ಸಣ್ಣವರ ಖೋಲಿ ಕಡೆ ಹೋದಳು.

ವ್ಯಸನವಾಯ್ತು! ದೊಡ್ಡವರು ಓಡಾಡಿದ ಮಠವಿದು ಎಂದುಕೊಳ್ಳುತ್ತ ಮಠದಿಂದ ಹೊರ ನಡೆವುದರಲ್ಲಿದ್ದ. ಕಾರಿನಲ್ಲಿ ಸಣ್ಣವರು ಬಂದು ಎದುರಾದರು. 'ಶರಣು' ಅಂದ ಚಂದ್ರಕಾಂತಯ್ಯ. 'ಅಣ್ಣ, ಪ್ರಸಾದ ತಗೊಂಡೇನು? ಅಕ್ಕ ಮಾಂತಮ್ಮ ಮಠದ ಕಡೆ ಬಂದದ್ದು ನೋಡಲಿಲ್ಲ' ಅಂದು 'ಶಿವಯೋಗಿಮಠರನ್ನು ಕಾಣಲು ಹೋಗಿದ್ದೆ. ಅದ್ಕ ಪ್ರವಚನ ಬೇಗ ಮುಗಿಸಿದೆ' ಅಂದು ಮಠ ಸೇರಿದರು. ಚಂದ್ರಕಾಂತಯ್ಯ ಶಿವರುದ್ರಯ್ಯನನ್ನು ಕಾಣುವ ನೆಪದಲ್ಲಿ ದಾಸ್ತಾನ ಖೋಲಿಗೆ ಬಂದ. ಅಲ್ಲಿ ಆತನಿರಲಿಲ್ಲ. ಚಡಪಡಿಸುತ್ತ ಮತ್ತೆ ಮಠದ ಪೀಠದ ಸ್ಥಳಕ್ಕೆ ಬಂದು, ಕಪ್ಪು ಹಲಗೆಯನ್ನು ಸರಿಯಾಗಿ ನಿಲ್ಲಿಸಿ 'ಭಕ್ತನ ಮನ ಹೆಣ್ಣಿನೊಳಗಾದರೆ ವಿವಾಹವಾಗಿ ಕೂಡುವುದು' ಎಂಬ ವಚನ ಬರೆದು ಮನೆಗೆ ಬಂದ. ಮರುದಿನ ಶಿವರುದ್ರಯ್ಯ, ಶಿವಲಿಂಗ ವಚನ ಓದಿ ಭಯಗೊಂಡರು. ತತ್ತರಿಸುತ್ತ ಓಡಾಡಿದರು. ಆದರೆ ಪೀಠದ ಸ್ಥಳಕ್ಕೆ ಮಾತ್ರ ಬರದೆ ದಾಸ್ತಾನ ಖೋಲಿ, ತೋಟದ ಕಡೆ ಇದ್ದರು. ಸಣ್ಣವರೂ ನಿತ್ಯಕರ್ಮಗಳನ್ನು ಮುಗಿಸಿ, ಲಿಂಗಪೂಜೆ ಮಾಡಿಕೊಂಡು, ಕಾವಿ ಬಟ್ಟೆಗಳನ್ನು ಧರಿಸಿ ಎಂದಿನಂತೆ ದೊಡ್ಡವರ ಲಿಂಗೈಕ್ಯ ಗದ್ದುಗೆಗೆ ನಮಸ್ಕಾರ ಮಾಡಲು ಬಂದಾಗ ಕಪ್ಪು ಹಲಗೆ ಮ್ಯಾಲಿದ್ದ ವಚನ ಓದಿದರು. ರಾತ್ರಿ ಮಠದ ಪ್ರವೇಶ ದ್ವಾರದಲ್ಲಿ ಕಂಡ ಚಂದ್ರಕಾಂತಯ್ಯ ಕಣ್ಣಮುಂದೆ ನಿಂತಂತಾಯಿತಂತೆ. ಬೆಕ್ಕನ್ನು ಕಂಡ ಇಲಿ ಕಣ್ಮರೆಯಾದಂತೆ ತಮ್ಮ ಖೋಲಿ ಸೇರಿದರಂತೆ. ಶಿವರುದ್ರಯ್ಯ ಸೂಕ್ಷ್ಮವಾಗಿ ಗಮನಿಸುತ್ತಿದ್ದನಂತೆ. ಸಣ್ಣವರು ಇಬ್ಬರು ಮಠದ ಕೆಲಸಗಾರರನ್ನು ಕರೆಸಿ ಕಪ್ಪು ಹಲಗೆಯನ್ನು ಮಠದ ಗೋಡಾನ್‌ಗೆ ಸಾಗಿಸಿದರಂತೆ. ವಾರ ಕಳೆಯುವುದರಲ್ಲಿ ಚಂದ್ರ ಕಾಂತಯ್ಯ ಆ ಕಪ್ಪು ಹಲಗೆಯನ್ನು ಶಿವರುದ್ರಯ್ಯ, ಶಿವಲಿಂಗನ ಸಹಾಯದಿಂದ ತನ್ನ ಮನೆಗೆ ಹೊತ್ತು ತರಿಸಿ ಬಂಕದಲ್ಲಿ ನಿಲ್ಲಿಸಿದ್ದ.



ಮಠದಲ್ಲಿ ಯಾವ ಸುಧಾರಣೆಗಳು ಕಾಣಲಿಲ್ಲ. ಆದರೆ ಸನಾತನಿಯರ ಸಲಹೆಗಳನ್ನು ಸಣ್ಣವರು ಸ್ವೀಕರಿಸಿ ಆಚರಣೆಗೂ ತರುತ್ತಿದ್ದರು. ದೊಡ್ಡವರಿದ್ದಾಗ ಗಣೇಶನನ್ನು ಕೂಡಿಸುತ್ತಿರಲಿಲ್ಲ. ಸಣ್ಣವರು ವಿಜೃಂಭಣೆಯಿಂದ ಐದು ದಿನ ಮಠದಲ್ಲಿ ಕೂಡಿಸಿ ಆಚರಿಸಿದರು. ದೊಡ್ಡವರಿದ್ದಾಗ ಮಠದಲ್ಲಿ